## ಕರ್ನಾಟಕ ವಿಧಾನ ಪರಿಷತ್ತು

| | |
|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 1316 |
| ಸದಸ್ಯರ ಹೆಸರು | ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ (ಸ್ಥಳೀಯ ಸಂಸ್ಥೆಯ ಕ್ಷೇತ್ರ) |
| ಉತ್ತರಿಸುವ ದಿನಾಂಕ | 24.12.2021 |
| ಉತ್ತರಿಸುವ ಸಚಿವರು | ಕೃಷಿ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಕೃಷಿ ಬೆಳೆಗಳಿಗೆ ಕನಿಷ್ಟ ಬೆಂಬಲ ಬೆಲೆ ನೀಡಲು ಮತ್ತು ಅವುಗಳಿಗೆ ಸೂಕ್ತ ಮಾರುಕಟ್ಟೆ ಒದಗಿಸುವ ಸಲುವಾಗಿ ರಚಿಸಿದ್ದ "ಕೃಷಿ ಬೆಲೆ ಆಯೋಗ" ಅಧ್ಯಯನದ ವರದಿ ಪೂರ್ಣಗೊಳಿಸಿ ಸರ್ಕಾರಕ್ಕೆ ಸಲ್ಲಿಸಿದೆಯೇ? | ಕರ್ನಾಟಕ ಕೃಷಿ ಬೆಲೆ ಆಯೋಗವನ್ನು ಸರ್ಕಾರವು 2014ರಲ್ಲಿ ರಚಿಸಿದ್ದು, ಆಯೋಗ ಪ್ರತಿ ವರ್ಷವೂ ರಾಜ್ಯದ ಪ್ರಮುಖ ಕೃಷಿ ಮತ್ತು ತೋಟಗಾರಿಕೆ ಬೆಳೆಗಳ ಸಾಗುವಳಿ ವೆಚ್ಚ, ಇಳುವರಿ ಮತ್ತು ಆದಾಯ, ಕೃಷಿ ಮಾರುಕಟ್ಟೆಯ ಸ್ಥಿತಿ ಗತಿಗಳು ಇತ್ಯಾದಿಗಳನ್ನೊಳಗೊಂಡ ವರದಿಯನ್ನು ಸರ್ಕಾರಕ್ಕೆ ಸಲ್ಲಿಸುತ್ತಿದೆ. ಅದರಂತೆ 2020-21ನೇ ಸಾಲಿನಲ್ಲಿ ಆಯೋಗವು ಸಿದ್ಧಪಡಿಸಿದ ವರದಿಯನ್ನು ಸನ್ಮಾನ್ಯ ಮುಖ್ಯಮಂತ್ರಿಯವರಿಗೆ ಸಲ್ಲಿಸಲಾಗಿರುತ್ತದೆ. |
| ಆ) | ಆಗಿದ್ದಲ್ಲಿ, ಕೃಷಿ ಬೆಲೆ ಆಯೋಗದ ವರದಿಯ ಶಿಫಾರಸ್ಸುಗಳೇನು? (ವರದಿಯ ವಿವರ ಒದಗಿಸುವುದು.) | 2020-21ನೇ ಸಾಲಿನಲ್ಲಿ ಕೃಷಿ ಬೆಲೆ ಆಯೋಗವು ಸಿದ್ಧಪಡಿಸಿದ ವರದಿಯ ಶಿಫಾರಸ್ಸುಗಳನ್ನು ಅನುಬಂಧದಲ್ಲಿ ಒದಗಿಸಿದೆ. |
| ಇ) | ರಾಜ್ಯದಲ್ಲಿ ಕೃಷಿ ಬೆಲೆ ಆಯೋಗದ ವರದಿಯ ಶಿಫಾರಸ್ಸುಗಳನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸಲು ಸರ್ಕಾರ ತೆಗೆದುಕೊಂಡ ಕ್ರಮಗಳೇನು? | ಕೃಷಿ ಬೆಲೆ ಆಯೋಗದ ವರದಿಯ ಶಿಫಾರಸ್ಸುಗಳನ್ನು ಸಂದರ್ಭಾನುಸಾರವಾಗಿ ಅನುಷ್ಠಾನಗೊಳಿಸಲಾಗುತ್ತದೆ ಹಾಗೂ ವಿವರಗಳನ್ನು ಅನುಬಂಧ-2 ರಲ್ಲಿ ಒದಗಿಸಲಾಗಿದೆ. |
| ಈ) | ರಾಜ್ಯದಲ್ಲಿ ಕೃಷಿ ಬೆಲೆ ಆಯೋಗದ ವರದಿಯ ಶಿಫಾರಸ್ಸುಗಳು ಯಾವ ಕಾಲಮಿತಿಯಲ್ಲಿ ಅನುಷ್ಠಾನಗೊಳ್ಳುವುದು? (ವಿವರ ಒದಗಿಸುವುದು) | ರಾಜ್ಯದಲ್ಲಿ ಕೃಷಿ ಬೆಲೆ ಆಯೋಗದ ವರದಿಯ ಶಿಫಾರಸ್ಸುಗಳನ್ನು ರಾಜ್ಯದ ರೈತರ ಹಿತದೃಷ್ಟಿಯಿಂದ ಸಂದರ್ಭಾನುಸಾರ ಹಾಗೂ ಅವಶ್ಯಕತೆಗನುಗುಣವಾಗಿ ಅನುಷ್ಠಾನಗೊಳಿಸಲಾಗುತ್ತಿದೆ. |

ಸಂಖ್ಯೆ: AGRI-ACT/189/ 2021

(ಬಿ.ಸಿ. ಪಾಟೀಲ್)

ಕೃಷಿ ಸಚಿವರು

## ಅನುಬಂಧ – I

## ಕೃಷಿ ಬೆಲೆ ಆಯೋಗದ 2020-21ನೇ ಸಾಲಿನ ವರದಿಯ ಪ್ರಮುಖ ಶಿಫಾರಸ್ಸುಗಳು

### I.ಬೆಳೆ ಶಿಫಾರಸ್ಸುಗಳು

**1. ಬೀಜಗಳು:**

i. ಕೃಷಿ ವಲಯವಾರು ಸೂಕ್ತವಾದ ಹೆಚ್ಚು ಇಳುವರಿ ಕೊಡುವ ಹಾಗೂ ಬರ / ಜವಗು ನಿರೋಧಕ ಮತ್ತು ರೋಗ / ಕೀಡೆ ನಿರೋಧಕ ತಳಿಗಳ ಸಂಶೋಧನೆಗಳ ಅವಶ್ಯಕತೆಯಿರುತ್ತದೆ.

ii. ತೋಟಗಾರಿಕೆಯಲ್ಲಿ ಒಣ ಭೂಮಿ ಪ್ರದೇಶಕ್ಕೆ ಸೂಕ್ತವಾದ ತಳಿಗಳ ಸಂಶೋಧನೆ ಇನ್ನೂ ಹೆಚ್ಚಿನ ಪ್ರಮಾಣದಲ್ಲಿ ಆಗಬೇಕಾಗಿದೆ.

iii. ತೋಟಗಾರಿಕೆಯಲ್ಲಿ ಹೆಚ್ಚಿನ ಗಿಡಗಳ ಸಾಂದ್ರತೆ ಇರುವ ಪದ್ಧತಿಗಳನ್ನು ಆವಿಷ್ಕಾರದೊಂದಿಗೆ ಪ್ರಚುರಪಡಿಸಬೇಕಾಗಿದೆ.

iv. ಸುಧಾರಿತ / ಸಂಕರಿತ ಬೀಜಗಳನ್ನು / ಸಸಿಗಳನ್ನು ರೈತರೇ ಉತ್ಪಾದನೆ / ತಯಾರಿಸಿಕೊಳ್ಳಲು ಪ್ರೋತ್ಸಾಹದಾಯಕ ಕ್ರಮಗಳನ್ನು ಹಮ್ಮಿಕೊಳ್ಳುವುದು ಸೂಕ್ತ.

**2. ಯಾಂತ್ರೀಕರಣ:**

i. ಖರೀದಿಗಾಗಿ ರಿಯಾಯ್ತಿ ನೀಡಲು ಈಗಿರುವ ಸಾಮಾಜಿಕ ಮಾನದಂಡದ ಜೊತೆಗೆ ಹಿಡುವಳಿ ಗಾತ್ರ ಆಧರಿಸಿ, ಸಣ್ಣ ಮತ್ತು ಅತಿ ಸಣ್ಣ ರೈತರಿಗೆ ಶೇ.90, ಮಧ್ಯಮ ರೈತರಿಗೆ ಶೇ.75 ಮತ್ತು ದೊಡ್ಡ ರೈತರಿಗೆ ಶೇ.50 ರಷ್ಟು ರಿಯಾಯ್ತಿ ನೀಡುವುದು ಸೂಕ್ತವಾಗುತ್ತದೆ.

ii. ಯಂತ್ರಧಾರೆಗಳನ್ನು ಸಾರ್ವಜನಿಕ – ಖಾಸಗಿ ಸಹಭಾಗಿತ್ವದಲ್ಲಿ (PPP) ಪ್ರತಿ ಹಳ್ಳಿಯಲ್ಲೂ ಸ್ಥಾಪಿಸುವುದು ಸೂಕ್ತ.

iii. ವ್ಯಕ್ತಿಗತವಾಗಿ ನಿರ್ವಹಣೆ ಮಾಡಬಹುದಾದ ಕೃಷಿ ಉಪಯೋಗಿ ಯಂತ್ರಗಳನ್ನು ಖರೀದಿಸಲು ನಿರುದ್ಯೋಗಿ ಯುವಕರಿಗೆ ಯಾವುದೇ ಆಸ್ತಿ ಆಧಾರ ಇಲ್ಲದೇ, ಕೇವಲ ಪರಸ್ಪರ ಜಾಮೀನು ಆಧರಿಸಿ, ಸೂಕ್ತ ರಿಯಾಯ್ತಿಯೊಂದಿಗೆ ಅಗತ್ಯ ಸಾಲ ನೀಡುವುದು ಸೂಕ್ತ.

iv. ಕೃಷಿ ಯಂತ್ರಗಳಿಗೆ ವಿಧಿಸುವ GST ದರವನ್ನು ಸಡಿಲಗೊಳಿಸುವುದು ಸೂಕ್ತ.

**3. ಮಣ್ಣಿನ ಆರೋಗ್ಯ**

i. ಪಶು ಸಂಗೋಪನೆ, ಕುಕ್ಕುಟೋದ್ಯಮ ಮುಂತಾದವುಗಳಿಗೆ ಹೆಚ್ಚಿನ ಪ್ರೋತ್ಸಾಹ ನೀಡಿದಲ್ಲಿ ಕೊಟ್ಟಿಗೆ ಗೊಬ್ಬರ (FYM) ಲಭ್ಯತೆ ಹೆಚ್ಚುತ್ತದೆ.

ii. ಎರೆ ಗೊಬ್ಬರ (Vermicompost) / ಕಾಂಪೋಸ್ಟ್ ಗೊಬ್ಬರ ತಯಾರಿಸಲು ಗುರಿ ನಿಗದಿತ ಕಾರ್ಯ ಯೋಜನೆಗಳನ್ನು ರೂಪಿಸಿ, ಪ್ರೋತ್ಸಾಹ ನೀಡಿದಲ್ಲಿ ಎರೆ ಗೊಬ್ಬರ / ಕಾಂಪೋಸ್ಟ್ ಗೊಬ್ಬರ ಪ್ರಮಾಣ ಹೆಚ್ಚುತ್ತದೆ.

iii. ಹೊಲದಲ್ಲಿಯ ಬೆಳೆಯುಳಿಕೆಗಳನ್ನು ಮಣ್ಣಿನಲ್ಲಿ ಸೇರಿಸಲು ಟ್ರ್ಯಾಕ್ಟರ್ ಚಾಲಿತ ರೋಟವೇಟರ್ ಯಂತ್ರ ಬಹು ಉಪಯೋಗಿಯಾಗಿದ್ದು, ಇದಕ್ಕೆ ಬಾಡಿಗೆಯಲ್ಲಿ ವಿಶೇಷ ರಿಯಾಯ್ತಿ ದರ ಹಾಗೂ ಖರೀದಿಗಾಗಿ ವಿಶೇಷ ರಿಯಾಯ್ತಿ ನೀಡುವುದು ಸೂಕ್ತ.

**4. ನೀರಾವರಿ**

i. ರಾಜ್ಯದ ಅಣೆಕಟ್ಟುಗಳ ವ್ಯಾಪ್ತಿಯಲ್ಲಿ ಇರುವ ನಾಲೆಗಳನ್ನು ಆಧುನೀಕರಿಸಿ ನೀರಾವರಿ ಸಾಮರ್ಥ್ಯವನ್ನು ಹೆಚ್ಚಿಸುವುದು.

ii. ಪ್ರಧಾನಮಂತ್ರಿ ಕೃಷಿ ಸಿಂಚಾಯಿ ಯೋಜನೆಯ (PMKSY) ಅನ್ವಯ ಏತ ನೀರಾವರಿ ಯೋಜನೆಗಳಿಗೆ ಹೆಚ್ಚಿನ ಆದ್ಯತೆಯನ್ನು ನೀಡುವಿಕೆ.

iii. ಹೊಸ ಕೆರೆಗಳನ್ನು ನಿರ್ಮಿಸುವಿಕೆ ಮತ್ತು ಈಗಾಗಲೇ ಇರುವ ಕೆರೆಗಳನ್ನು ಆಧುನೀಕರಿಸುವಿಕೆ.

iv. ಒಡ್ಡುಗಳು, ವೆಂಟೆಡ್ ಡ್ಯಾಮ್‌ಗಳು, ಉಪ್ಪು ನೀರು ಹೊರಹಾಕುವ ಡ್ಯಾಮ್‌ಗಳು, ನದಿಗಳು ಮತ್ತು ಹೊಳೆಗಳಿಗೆ ಅಣೆಕಟ್ಟು ಮತ್ತು ಪಿಕಪ್‌ಗಳನ್ನು ನಿರ್ಮಿಸುವುದು.

v. ರೈತರು ತಮ್ಮ ಜಮೀನುಗಳಲ್ಲಿ ಬೀಳುವ ಮಳೆ ನೀರನ್ನು ಸ್ವಲ್ಪವೂ ಪೋಲಾಗದಂತೆ ಸಂರಕ್ಷಿಸಿಕೊಳ್ಳಲು ಹೊಲಕ್ಕೊಂದು ಕೆರೆ ಅಥವಾ ಕೃಷಿ ಹೊಂಡ ನಿರ್ಮಿಸಿಕೊಳ್ಳುವಿಕೆ.

**5. ಉತ್ಪಾದಕತೆ (ಎಕರೆ / ಹೆಕ್ಟೇರ್‌ವಾರು ಇಳುವರಿ) ಮತ್ತು ರೈತರ ಆದಾಯ ಹೆಚ್ಚಳ:**

i. ರೈತರು ಕೃಷಿ ಆದಾಯದ ಜೊತೆಗೆ ಕೃಷಿ ಸಂಬಂಧಿತ ಚಟುವಟಿಕೆಗಳಾದ ಹೈನುಗಾರಿಕೆ, ಕೋಳಿ ಸಾಕಣೆ, ಕುರಿ / ಮೇಕೆ ಸಾಕಣೆ, ಮೀನುಗಾರಿಕೆ, ಜೇನು ಕೃಷಿ, ರೇಷ್ಮೆ ಕೃಷಿ ಮಾಡಲು ಮತ್ತು ಹಣ್ಣಿನ ಬೆಳೆಗಳು, ಅರಣ್ಯ ಬೆಳೆಗಳು, ತೋಟದ ಬೆಳೆಗಳನ್ನು ಬೆಳೆಯಲು ತಮ್ಮ ಜಮೀನಿನಲ್ಲಿಯೇ ಕೆರೆ / ಹೊಂಡ ನಿರ್ಮಿಸಿಕೊಂಡು ಜಲ ಮೂಲ ಹೊಂದಿ ಸಮಗ್ರ ಕೃಷಿ ಪದ್ಧತಿಯನ್ನು ಅಳವಡಿಸಿಕೊಂಡು ಹೆಚ್ಚಿನ ಆದಾಯವನ್ನು ಪಡೆಯಬೇಕು. ಇದಕ್ಕಾಗಿ ಸರ್ಕಾರ ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಬೇಕು.

ii. ಸಮಯ ಪಾಲನೆ, ಕೊಟ್ಟಿಗೆ ಗೊಬ್ಬರ ಭೂಮಿಯಲ್ಲಿ ಹರಡುವುದು, ಎರೆ ಗೊಬ್ಬರ ಬಳಸುವುದು, ಹಸಿರೆಲೆ ಗೊಬ್ಬರ ಭೂಮಿಗೆ ಸೇರಿಸುವುದು, ಸಂದಿಗ್ಧ ಹಂತದಲ್ಲಿ ನೀರಾವರಿ, ಸರದಿ ಬೆಳೆ ಪದ್ಧತಿ ಅನುಸರಿಸುವುದು (Alternating Croping System), ಕೀಟ / ಪೀಡೆ ನಿಯಂತ್ರಣಕ್ಕಾಗಿ ಜೈವಿಕ ನಿಯಂತ್ರಣ ಕ್ರಮಗಳ ಜೊತೆಗೆ ಮಾರುಕಟ್ಟೆ ಮಾಹಿತಿಯೊಂದಿಗೆ ಬೆಳೆ ಯೋಜನೆ ಮಾಡುವುದು ಮುಂತಾದವುಗಳನ್ನು ಅನುಸರಿಸಿ, ಇಳುವರಿ ಹೆಚ್ಚಿಸಿಕೊಳ್ಳಲು ಸಾಧ್ಯವಿದೆ. ಇದಕ್ಕಾಗಿ ಸೂಕ್ತ ಯೋಜನೆಗಳನ್ನು ರೂಪಿಸಿಕೊಳ್ಳಬೇಕಾಗಿದೆ.

**6.ತಾಂತ್ರಿಕತೆ:**

- ಆಧುನಿಕ ತಂತ್ರಜ್ಞಾನಗಳನ್ನು (Machine Learning and Artificial Intelligence) ಬಳಸಿಕೊಂಡು ಕೃಷಿ / ತೋಟಗಾರಿಕೆ / ಮಾರುಕಟ್ಟೆ ಇಲಾಖೆಗಳು ಇ – ಆಡಳಿತ ಇಲಾಖೆಯ ಸಹಯೋಗದೊಂದಿಗೆ NIC ಮೂಲಕವಾಗಲಿ ಅಥವಾ ಇನ್ನಿತರರ ಮೂಲಕವಾಗಲಿ, ಹಂಗಾಮು, ಬೀಜ, ಗೊಬ್ಬರ, ಸುಧಾರಿತ ಬೇಸಾಯ ಕ್ರಮಗಳು, ಹವಾಮಾನ ಏರಿಳಿತಗಳು, ಮಾರುಕಟ್ಟೆ ಬೆಲೆ ಏರಿಳಿತಗಳು ಮುಂತಾದವುಗಳ ಮಾಹಿತಿ ಒದಗಿಸಲು ಗಣಕ ತಂತ್ರಾಂಶವನ್ನು ಅಭಿವೃದ್ಧಿಪಡಿಸಬೇಕು. ಅಭಿವೃದ್ಧಿ ಪಡಿಸಲಾಗಿರುವ ತಂತ್ರಾಂಶಗಳನ್ನು ವಿಶ್ವವಿದ್ಯಾನಿಲಯಗಳ, ಕೃಷಿ ವಿಜ್ಞಾನ ಕೇಂದ್ರಗಳ ಮೂಲಕ ಸೂಕ್ತ ತರಬೇತಿಯೊಂದಿಗೆ ರೈತರ ಹಂತಕ್ಕೆ (Lab to Land and Land to Lab) ತಲುಪುವಂತೆ ಕಾರ್ಯ ಯೋಜನೆ ರೂಪಿಸಬೇಕು ಮತ್ತು ರೈತರು ಅಳವಡಿಸಿಕೊಳ್ಳಲು ಪ್ರೋತ್ಸಾಹದಾಯಕ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಬೇಕು.

7. **ಪ್ರಾತ್ಯಕ್ಷತೆ ಮತ್ತು ತರಬೇತಿಗಳು**

- ರೈತರು ಆಧುನಿಕ ಬೇಸಾಯ ಕ್ರಮಗಳನ್ನು ಅಳವಡಿಸಿಕೊಳ್ಳುವಂತಾಗಲು ಕೃಷಿ / ತೋಟಗಾರಿಕೆ ವಿಶ್ವವಿದ್ಯಾನಿಲಯಗಳಲ್ಲಿ. ಸಂಶೋಧನಾ ಕೇಂದ್ರಗಳಲ್ಲಿ ರೈತರ ಹೊಲಗಳಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಪ್ರಾತ್ಯಕ್ಷಿತೆ ಮತ್ತು ತರಬೇತಿಗಳನ್ನು ಏರ್ಪಡಿಸುವುದು ಸೂಕ್ತ.

8. **ರೈತರ ಸಂಶೋಧನೆಗಳಿಗಾಗಿ ಪ್ರೋತ್ಸಾಹದಾಯಕ ಕ್ರಮಗಳು**

- ರೈತರು ಆವಿಷ್ಕಾರಗೊಳಿಸಿರುವ ಸಂಶೋಧನೆಗಳು ಕೃಷಿ ಉತ್ಪಾದನಾ ವೆಚ್ಚ ಕಡಿಮೆಯಾಗುವುದರ ಜೊತೆಗೆ ಉತ್ಪಾದಕತೆ ಹೆಚ್ಚಾಗಿ. ಉತ್ಪಾದನೆ ಸುಸ್ಥಿರಗೊಳ್ಳಲು ಸಹಕಾರಿಯಾಗಿವೆ. ಈ ಹಿನ್ನೆಲೆಯಲ್ಲಿ ರೈತ ಸಂಶೋಧಕರು ಆವಿಷ್ಕಾರಗೊಳಿಸಿರುವ ಸಂಶೋಧನೆಗಳಿಗೆ ಪ್ರೋತ್ಸಾಹ ನೀಡಲು "**ರೈತ ಆವಿಷ್ಕಾರ ನಿಧಿ**" ಯನ್ನು ಎಲ್ಲಾ ವಿಶ್ವವಿದ್ಯಾಲಯಗಳಲ್ಲಿಯೂ ಕಡ್ಡಾಯವಾಗಿ ಸ್ಥಾಪಿಸುವುದು ಸೂಕ್ತ.

9. **ಹಣಕಾಸು ಮತ್ತು ಮಾನವ ಸಂಪನ್ಮೂಲದ ಅಗತ್ಯತೆ**

- ವೈಜ್ಞಾನಿಕ ಕೃಷಿಯನ್ನು ರಾಜ್ಯದ ರೈತರು ಅಳವಡಿಸಿಕೊಳ್ಳುವಂತಾಗಲು ಕೃಷಿ ವಿಶ್ವವಿದ್ಯಾಲಯಗಳು ಹಾಗೂ ರಾಜ್ಯದ ಕೃಷಿ ಮತ್ತು ತೋಟಗಾರಿಕೆ ಇಲಾಖೆಗಳು ಮಾಡುತ್ತಿರುವ ಈ ಪ್ರಯತ್ನಗಳನ್ನು ಇನ್ನಷ್ಟು ವ್ಯಾಪಕವಾಗಿಸಲು ಹಾಗೂ ಯಶಸ್ವಿಗೊಳಿಸಲು ಸರ್ಕಾರವು ಈ ಸಂಸ್ಥೆಗಳಿಗೆ ನಿರ್ದಿಷ್ಟ ಮಾನವ ಸಂಪನ್ಮೂಲ ಒದಗಿಸಲು ಮತ್ತು ಅನುದಾನವನ್ನು ಹೆಚ್ಚಿಸಲು. ಆಯೋಗವು ಶಿಪಾರಸ್ಸು ಮಾಡುತ್ತದೆ.

10. **ಬೆಳೆ ಗಂಡಾಂತರಗಳು ಮತ್ತು ಪರಿಹಾರ**

- ಕೃಷಿ ಪರಿಕರಗಳ ದರ ಹೆಚ್ಚಳದಿಂದಾಗಿ ಸಾಗುವಳಿ ವೆಚ್ಚವು ಹೆಚ್ಚಾಗಿರುತ್ತದೆ. ಆದ್ದರಿಂದ ಸಾಗುವಳಿ ವೆಚ್ಚದ ಪೈಕಿ ಚರ ವೆಚ್ಚದಷ್ಟಾದರೂ ಪರಿಹಾರ ಧನ ನೀಡುವುದು ಸೂಕ್ತ. ಈ ದಿಶೆಯಲ್ಲಿ NDRF ಮಾರ್ಗಸೂಚಿಗಳನ್ನು ಮಾರ್ಪಾಡು ಮಾಡಿ. ಕೃಷಿ ಮತ್ತು ವಾಣಿಜ್ಯ ಬೆಳೆಗಳು/ ಬಹುವಾರ್ಷಿಕ ಬೆಳೆಗಳಿಗೆ ಅನುಕ್ರಮವಾಗಿ ಪ್ರತಿ ಹೆಕ್ಟೇರ್ ಗೆ ರೂ.50,000 ಮತ್ತು ರೂ. 1,00,000 ಪರಿಹಾರ ಧನ ಒದಗಿಸಲು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಅವಶ್ಯಕವಾಗಿದೆ.

11. **ಬೆಳೆ ವಿಮೆ ಮತ್ತು ಬೆಳೆ ಪರಿಹಾರಗಳು**

i. ಕೃಷಿ / ತೋಟಗಾರಿಕೆ ಎಲ್ಲಾ ಬೆಳೆಗಳನ್ನು ವಿಮಾ ವ್ಯಾಪ್ತಿಗೆ ತರುವುದು ಅವಶ್ಯಕವಾಗಿರುತ್ತದೆ.

ii. ಹಣಕಾಸು ವರ್ಷದ ಮೊದಲನೆಯ ದಿನವಾದ ಏಪ್ರಿಲ್ 1 ರಂದು ಮೂರು ಹಂಗಾಮಿಗೆ ವಿಮೆ ನೋಂದಣಿ ಪ್ರಕಟಣೆ ಹೊರಡಿಸಿ ಮುಂಗಾರು ಹಂಗಾಮಿಗಾಗಿ ಸೆಪ್ಟೆಂಬರ್ 15. ಹಿಂಗಾರಿ ಹಂಗಾಮಿಗಾಗಿ ಡಿಸೆಂಬರ್ 31 ಹಾಗೂ ಬೇಸಿಗೆ ಹಂಗಾಮಿಗೆ ಫೆಬ್ರುವರಿ 15ರವರೆಗೆ ನೋಂದಾಯಿಸಿಕೊಳ್ಳಲು ರೈತರಿಗೆ ಅವಕಾಶ ನೀಡಬೇಕು.

iii. ಬೆಳೆ ವಿಮೆಯಲ್ಲಿ ರೈತರು ನೋಂದಾಯಿಸಿಕೊಳ್ಳುವುದು ಐಚ್ಛಿಕವಾಗಿರುವುದರ ಬದಲಾಗಿ ನೋಂದಾಯಿಸಿಕೊಳ್ಳುವುದನ್ನು ಕಡ್ಡಾಯಗೊಳಿಸಬೇಕು.

iv. ಸನ್ಮಾನ್ಯ ಪ್ರಧಾನ ಮಂತ್ರಿಗಳ "ಆತ್ಮ ನಿರ್ಭರ ಭಾರತ", ರೈತರ ಆದಾಯ ದ್ವಿಗುಣಗೊಳಿಸುವ ಮಹತ್ವಾಕಾಂಕ್ಷೆ ಹಾಗೂ ಸನ್ಮಾನ್ಯ ಮುಖ್ಯಮಂತ್ರಿಗಳ "ಸ್ವಾವಲಂಬಿ ರೈತ" ಮಹದಾಸೆ ಹೊಂದಿದ್ದು, ಇದನ್ನು ಸಾಧಿಸಲು ಬೆಳೆ ವಿಮೆ ಯೋಜನೆ ರೈತರನ್ನು ಬೆಳೆ ಗಂಡಾಂತರದಿಂದ ರಕ್ಷಿಸುತ್ತದೆ. ಅದೇ

ರೀತಿ ರೈತರನ್ನು "ಬೆಲೆ ಗಂಡಾಂತರ" ದಿಂದ ರಕ್ಷಿಸಲು "ಬೆಲೆ ವಿಮೆ" ಯೋಜನೆಯನ್ನು ರೂಪಿಸಿ ಕಾರ್ಯಾನುಷ್ಠಾನಗೊಳಿಸುವುದು ಸೂಕ್ತ ಮತ್ತು ಅವಶ್ಯಕವಾಗಿದೆ.

## II.ಬೆಲೆ ಶಿಫಾರಸ್ಸುಗಳು

### 1. ಕೃಷಿ ಉತ್ಪಾದನಾ ವೆಚ್ಚದ ಲೆಕ್ಕಾಚಾರ

- ಮಣ್ಣಿನ ಆರೋಗ್ಯ ಕಾಪಾಡಲು ರೈತರು ಅನೇಕ ವೆಚ್ಚಗಳನ್ನು ಭರಿಸಬೇಕಾಗುತ್ತದೆ. ಆದ್ದರಿಂದ ಬೆಂಬಲ ಬೆಲೆ ಶಿಫಾರಸ್ಸು ಮಾಡಲು CACPಯು ವೆಚ್ಚ $A_2$+FL ಲೆಕ್ಕಾಚಾರದ ಬದಲಾಗಿ ವೆಚ್ಚ $C_3$ ಪರಿಗಣಿಸುವುದು ಸೂಕ್ತವಾಗಿರುತ್ತದೆ.

### 2. ಕೃಷಿ ಉತ್ಪನ್ನಗಳ ಬೆಲೆ – ರೈತರ ಆದಾಯ

- ರೈತರು ಬೆಳೆದ ಕೃಷಿ ಉತ್ಪನ್ನಗಳಿಗೆ ಲಾಭದಾಯಕ ಬೆಲೆ ದೊರಕಿಸುವಂತಾಗಲು ಕೇಂದ್ರ ಸರ್ಕಾರವು ಈಗ ಅನುಸರಿಸುತ್ತಿರುವ ಕನಿಷ್ಠ ಬೆಂಬಲ ಬೆಲೆ ನಿಗದಿಯಲ್ಲಿ ವೆಚ್ಚ $A_2$+FL+50% ಗೆ ಬದಲಾಗಿ ಒಟ್ಟು ವೆಚ್ಚ ($C_2$) ವನ್ನು ಪರಿಗಣಿಸಿ ಶೇ.೫೦ ರಷ್ಟು ಲಾಭಾಂಶವನ್ನು ಸೇರಿಸಿ ಬೆಂಬಲ ಬೆಲೆ ಘೋಷಿಸಬೇಕೆಂದು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಶಿಫಾರಸ್ಸು ಮಾಡುವುದು ಅವಶ್ಯಕ. ಇದರಿಂದಾಗಿ **"ಯುವಕರ ನಡೆ ಕೃಷಿಯೆಡೆ"** ಉದ್ದೇಶವನ್ನು ಸಾಧಿಸಬಹುದಾಗಿದೆ.

### 3.ಉಲ್ಲೇಖ ಬೆಲೆ (Reference Price)

i. APMC ಒಳಗಡೆ ಮತ್ತು APMC ಹೊರ ಭಾಗದಲ್ಲಿಯ ಎಲ್ಲಾ ವ್ಯವಹಾರ ವಹಿವಾಟುಗಳಿಗೆ ಕೇಂದ್ರ ಸರ್ಕಾರ ಘೋಷಿತ ಬೆಂಬಲ ಬೆಲೆಯನ್ನು (MSP) ಉಲ್ಲೇಖ ಬೆಲೆ (Reference Price) ಆಗಿ ಪರಿಗಣಿಸುವುದು ಸೂಕ್ತ. ಇದಕ್ಕಾಗಿ ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಬೆಂಬಲ ಬೆಲೆಯನ್ನು (MSP) ಉಲ್ಲೇಖ ಬೆಲೆ (Reference Price) ಎಂದು ಪರಿಗಣಿಸುವಂತೆ ಕಾಯಿದೆ ರೂಪಿಸಲು ಶಿಫಾರಸ್ಸು ಮಾಡಬೇಕು.

ii. ರೈತರಿಗೆ ಸ್ಪರ್ಧಾತ್ಮಕ ಬೆಲೆ ದೊರಕಿಸುವಲ್ಲಿ ಮಹತ್ವದ ಪಾತ್ರವಹಿಸುತ್ತಿರುವ APMC ಗಳನ್ನು ಸದೃಢಗೊಳಿಸಲು, APMC ಒಳಗಡೆ ಮತ್ತು APMC ಹೊರ ಭಾಗದಲ್ಲಿನ ವ್ಯವಹಾರ ವಹಿವಾಟುಗಳಿಗೆ ಮಾರುಕಟ್ಟೆ ಶುಲ್ಕವು ಒಳಗೊಂಡಂತೆ ಸಮಾನ ಮಾನದಂಡ (Leval Playing) ವಿಧಿಸುವುದು ಸೂಕ್ತ.

iii. ರಾಜ್ಯದಲ್ಲಿ APMC ಹೊರ ಭಾಗದಲ್ಲಿನ ವ್ಯವಹಾರದಲ್ಲಿ ನೇರ ಖರೀದಿಗೆ ಅವಕಾಶವಿದ್ದು, ಖರೀದಿ ದರ ಮತ್ತು ಖರೀದಿಯ ಪಾವತಿ ಬಗ್ಗೆ ದಾಖಲಾತಿ ವ್ಯವಸ್ಥೆಯ ಜೊತೆಗೆ ಮೇಲ್ವಿಚಾರಣೆ ಅತ್ಯವಶ್ಯಕವಾಗಿದ್ದು. ಇದಕ್ಕಾಗಿ ಸೂಕ್ತ ನಿಯಮಾವಳಿಗಳನ್ನು ರೂಪಿಸುವುದು ಅವಶ್ಯಕವಾಗಿದೆ.

### 4. ಕನಿಷ್ಠ ಬೆಂಬಲ ಬೆಲೆಯಲ್ಲಿ ಕೃಷಿ ಉತ್ಪನ್ನಗಳ ಘೋಷಣೆ ಮತ್ತು ಖರೀದಿ

- **ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ (NFSA)**

i. NFSA ಅನ್ವಯ ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ವಿತರಿಸಲಾಗುವ ಭತ್ತ, ಜೋಳ, ರಾಗಿ ಆಹಾರಧಾನ್ಯಗಳನ್ನು ಬೆಂಬಲ ಬೆಲೆಯಲ್ಲಿ ಖರೀದಿಸಿ, ರಾಜ್ಯದಲ್ಲಿಯ ಪಡಿತರ ವ್ಯವಸ್ಥೆಯ ಫಲಾನುಭವಿಗಳಿಗೆ ಹಂಚುವುದು ಅತ್ಯಂತ ಸೂಕ್ತ ಮತ್ತು ಅವಶ್ಯಕವಾಗಿರುತ್ತದೆ.

ii. ಪಡಿತರ ವ್ಯವಸ್ಥೆಯಲ್ಲಿ 3 ಕೆ.ಜಿ ಅಕ್ಕಿಯಂತೆ ವಿತರಿಸಲು 20.02 ಲಕ್ಷ ಟನ್ ಅಕ್ಕಿಯ ಅವಶ್ಯಕತೆಯಿದ್ದು. ಇದಕ್ಕಾಗಿ ಕೇಂದ್ರ ಸರ್ಕಾರ 3.35 ಲಕ್ಷ ಟನ್ ಅಕ್ಕಿ ಅಂದರೆ 5 ಲಕ್ಷ ಟನ್ ಭತ್ತವನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲು ಅನುಮತಿಸಿದ್ದು. ಇದನ್ನು 20 ಲಕ್ಷ ಟನ್ ಅಕ್ಕಿ ಅಂದರೆ 30 ಲಕ್ಷ ಟನ್ ಭತ್ತಕ್ಕೆ ಹೆಚ್ಚಿಸಲು ಕೇಂದ್ರದ ಅನುಮತಿ ಪಡೆಯುವುದು ಸೂಕ್ತ.

iii. ಪಡಿತರ ವ್ಯವಸ್ಥೆಯಲ್ಲಿ 2 ಕೆ.ಜಿ ರಾಗಿ / ಜೋಳ ವಿತರಿಸಲು 5.29 ಲಕ್ಷ ಟನ್ ರಾಗಿ, 5.06 ಲಕ್ಷ ಟನ್ ಜೋಳವನ್ನು ಬೆಂಬಲ ಬೆಲೆಯಲ್ಲಿ ಖರೀದಿಸಲು ಕೇಂದ್ರದ ಅನುಮತಿ ಪಡೆಯುವುದು ಸೂಕ್ತ.

iv. FCI ಸಂಸ್ಥೆಯು ಬೆಂಬಲ ಬೆಲೆಯಲ್ಲಿ ಖರೀದಿಸಿದ ಉತ್ಪನ್ನಗಳನ್ನು ಪಡಿತರ ವ್ಯವಸ್ಥೆಯಲ್ಲಿ ವಿತರಿಸಿ Utilization Certificate ಕೊಟ್ಟನಂತರ ಖರೀದಿ ವೆಚ್ಚವನ್ನು ಖರೀದಿ ಸಂಸ್ಥೆಗಳಿಗೆ ಕೇಂದ್ರ ಸರ್ಕಾರ ಬಿಡುಗಡೆ ಮಾಡುತ್ತದೆ. ಇದರಿಂದಾಗಿ ಖರೀದಿ ಸಂಸ್ಥೆಗಳಿಗೆ ಹಣ ಪಾವತಿ ವಿಳಂಬವಾಗುತ್ತದೆ. ಆವರ್ತ ನಿಧಿಯ ಮೊತ್ತ ಕೊರತೆಯಿಂದಾಗಿ ರೈತರಿಗೆ ಪಾವತಿಸುವಲ್ಲಿ ಕೂಡಾ ವಿಳಂಬವಾಗುತ್ತದೆ. ಇದನ್ನು ಹೋಗಲಾಡಿಸಲು ಈಗಾಗಲೇ NAFED ಸಂಸ್ಥೆಯು ಅನುಸರಿಸುತ್ತಿರುವ ಪದ್ಧತಿಯನ್ನು FCI ಕೂಡಾ ಅನುಸರಿಸುವಂತಾಗಲು ರಾಜ್ಯ ಸರ್ಕಾರವು ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಿ ಒತ್ತಾಯಿಸುವುದು ಸೂಕ್ತ.

v. NFSA ಅನ್ವಯ ಸಾರ್ವಜನಿಕ ಪಡಿತರ ವ್ಯವಸ್ಥೆಯಲ್ಲಿ ವಿತರಿಸಲು ಖರೀದಿಸಲಾಗುವ ಭತ್ತ, ಜೋಳ, ರಾಗಿ ಬೆಳೆಗಾರರಿಗೆ ಶೀಘ್ರವಾಗಿ ಹಣ ಪಾವತಿಸಲು ಬ್ಯಾಂಕುಗಳಿಂದ ಸಾಲ (Credit Facility) ಪಡೆಯುವುದು ಸೂಕ್ತ. ಇದಕ್ಕಾಗಿ ರಾಜ್ಯ ಸರ್ಕಾರ ಭದ್ರತೆ ನೀಡಬೇಕಾಗುತ್ತದೆ. ರಾಜ್ಯ ಸರ್ಕಾರವು ನಿರ್ವಹಣಾ ವೆಚ್ಚದಲ್ಲಿ ಬಡ್ಡಿ ಸಮೇತ ಕೇಂದ್ರ ಸರ್ಕಾರದಿಂದ ಹಣ ಪಡೆಯಲು ಅವಕಾಶವಿರುತ್ತದೆ.

- **ಕೇಂದ್ರ ಸರ್ಕಾರದ ಮಾರುಕಟ್ಟೆ ಖಾತರಿ ಯೋಜನೆ**
- **ಬೆಂಬಲ ಬೆಲೆಯಲ್ಲಿ ಖರೀದಿ ಯೋಜನೆ (PSS):**

- ಕೊಯ್ಲು ಪ್ರಾರಂಭಕ್ಕೆ ಮುಂಚಿತವಾಗಿ ಕೇಂದ್ರದ ಅನುಮೋದನೆ ಪಡೆದು ಪೂರ್ವ ಸಿದ್ಧತೆಗಳೊಂದಿಗೆ ಹಂಗಾಮಿಗೆ ಅನುಗುಣವಾಗಿ ಖರೀದಿ ಕೇಂದ್ರಗಳನ್ನು ಪ್ರಾರಂಭಿಸಬೇಕು.
- ಮುಸುಕಿನಜೋಳ ಮತ್ತು ಸಜ್ಜೆ ಧಾನ್ಯಗಳನ್ನು PSS ಯೋಜನೆಯಲ್ಲಿ ಬೆಂಬಲ ಬೆಲೆಯಲ್ಲಿ ಖರೀದಿಸಲು ಕೇಂದ್ರದ ಅನುಮತಿ ಪಡೆಯಬೇಕು.
- ಕೇಂದ್ರ ಸರ್ಕಾರದ ಘೋಷಿತ ಬೆಂಬಲ ಬೆಲೆಯ ಕಾರ್ಯಾನುಷ್ಠಾನಗೊಳಿಸಲು ಕೇಂದ್ರ ಸರ್ಕಾರ ಹಣ ಬಿಡುಗಡೆ ಮಾಡುವಲ್ಲಿ ವಿಳಂಬವಾಗುತ್ತಿರುವುದರಿಂದ ಸಕಾಲದಲ್ಲಿ ರೈತರ ಖಾತೆಗೆ ಹಣ ವರ್ಗಾವಣೆ ಮಾಡಲು ರಾಜ್ಯ ಸರ್ಕಾರದ ಆವರ್ತ ನಿಧಿಯಿಂದ ಹಣಕಾಸು ನೆರವು ಪಡೆಯಲಾಗುತ್ತಿದೆ. ಆದ್ದರಿಂದ ರಾಜ್ಯ ಸರ್ಕಾರವು ಆವರ್ತ ನಿಧಿಯ ಮೊತ್ತವನ್ನು ರೂ.10 ಸಾವಿರ ಕೋಟಿಗಳಿಗೆ ಹೆಚ್ಚಿಸುವುದು ಸೂಕ್ತ.
- ಸಿರಿಧಾನ್ಯ ಮತ್ತು ಸಾವಯವ ಉತ್ಪನ್ನಗಳಿಗೆ ಉತ್ಪಾದನಾ ವೆಚ್ಚ ಆಧರಿಸಿ ಬೆಂಬಲ ಬೆಲೆ ಘೋಷಿಸಿ, ಬೆಂಬಲ ಬೆಲೆಯಲ್ಲಿ ಖರೀದಿಸುವ ವ್ಯವಸ್ಥೆ ಜಾರಿಗೊಳಿಸಬೇಕು. ಪ್ರಮುಖ ಸಿರಿಧಾನ್ಯಗಳಾದ ನವಣೆ, ಸಾಮೆ, ಕೊರಲೆ ಇತ್ಯಾದಿಗಳಿಗೆ ಉತ್ಪಾದನಾ ವೆಚ್ಚದ ಮೇಲೆ ರಾಜ್ಯ ಸರ್ಕಾರ ಸೂಕ್ತ ಬೆಲೆ ನಿರ್ಧರಿಸಿ ಖರೀದಿಸಿ, ಅಂಗನವಾಡಿ ಮಕ್ಕಳಿಗೆ, ಬಾಣಂತಿಯರಿಗೆ, ಬಿಸಿ ಊಟ ಹಾಗೂ ಶಾಲಾ ಮಕ್ಕಳ ಸಾಯಂಕಾಲದ ಅಲ್ಪೋಪಹಾರಕ್ಕೆ ವಿತರಿಸಲು ಕ್ರಿಯಾ ಯೋಜನೆ ರೂಪಿಸಿ ಪ್ರೋತ್ಸಾಹಿಸಬೇಕು.
- ಹಿಂದಿನ ವರ್ಷಗಳಲ್ಲಿ ತೊಗರಿ, ಭತ್ತ, ಕೊಬ್ಬರಿ ಮುಂತಾದವುಗಳಿಗೆ ರಾಜ್ಯ ಸರ್ಕಾರ ಪ್ರೋತ್ಸಾಹಧನ ನೀಡಿದಂತೆ ಪ್ರಸ್ತುತ ಸಾಲಿನಲ್ಲಿ ಕೃಷಿ ಬೆಲೆ ಆಯೋಗದ ಉತ್ಪಾದನಾ ವೆಚ್ಚದ ಅನುಸಾರ, ರಾಜ್ಯ ಸರ್ಕಾರದ ಹಣಕಾಸಿನ ಲಭ್ಯತೆಯ ಇತಿಮಿತಿಗೊಳಪಟ್ಟು ಪ್ರೋತ್ಸಾಹಧನ ನೀಡಬಹುದಾಗಿದೆ.

**5. ಬೆಲೆ ಏರಿಳಿತ ತಪ್ಪಿಸಲು – ಆದಾಯ ಸುಸ್ಥಿರತೆ ಸಾಧಿಸಲು - ಬೆಲೆ ಮುನ್ನಂದಾಜು - ಬೆಳೆ ಯೋಜನೆ**

- ಆಧುನಿಕ ತಂತ್ರಜ್ಞಾನ ಬಳಸಿಕೊಂಡು ಹವಾಗುಣ, ಉತ್ಪಾದನೆ, ಬೇಡಿಕೆ ಮುಂತಾದವುಗಳನ್ನೊಳಗೊಂಡ ತಂತ್ರಾಂಶವನ್ನು ಅಭಿವೃದ್ಧಿಪಡಿಸಿ, ಮಾರುಕಟ್ಟೆ ಬೆಲೆಗಳ

ಮುನ್ಸೂಚನೆ ಮಾಹಿತಿಯನ್ನು ಬೆಳೆ ಬಿತ್ತನೆಗಿಂತಲೂ ಮುಂಚಿತವಾಗಿ ನೀಡಿದಲ್ಲಿ ರೈತರು ಲಾಭದಾಯಕ ಬೆಳೆ ಯೋಜನೆಯನ್ನು ಅನುಸರಿಸಲು ಸಾಧ್ಯವಾಗಲಿದೆ.

- ಮಾರುಕಟ್ಟೆ ಬೆಲೆಗಳನ್ನು ಮುನ್ನಂದಾಜಿಸಲು ಇ –ಆಡಳಿತ ಇಲಾಖೆಯ ಸಹಯೋಗದೊಂದಿಗೆ ಕೃಷಿ / ತೋಟಗಾರಿಕೆ / ಮಾರುಕಟ್ಟೆ ಇಲಾಖೆಗಳು NIC ಮೂಲಕವಾಗಲೀ ಅಥವಾ ಮಾರುಕಟ್ಟೆ ಬೆಲೆಗಳ ಮುನ್ನಂದಾಜಿಸುವ ಮಾಹಿತಿ ತಂತ್ರಜ್ಞಾನ ಪರಿಣಿತರುಗಳಿಂದಾಗಲೀ ಅಭಿವೃದ್ಧಿಪಡಿಸುವುದು ಅತ್ಯವಶ್ಯಕವಾಗಿದೆ.

**6. ಬೆಳೆ ಯೋಜನೆ – ಸಾಧಿಸಲು ಪ್ರೋತ್ಸಾಹದಾಯಕ ಕ್ರಮಗಳು**

- ಕೇಂದ್ರ ಸರ್ಕಾರದ ಕಿಸಾನ್ ಸಮ್ಮಾನ್ ಯೋಜನೆಯಲ್ಲಿ ವಾರ್ಷಿಕವಾಗಿ ರೂ.6000 ಗಳನ್ನು ರೂ.10,000 ಗಳಿಗೆ ಹೆಚ್ಚಿಸಿ, ಎರಡು ಕಂತುಗಳಲ್ಲಿ ರೈತರ ಖಾತೆಗೆ ವರ್ಗಾಯಿಸುವಂತೆ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವುದು ಸೂಕ್ತ.
- ರಾಜ್ಯ ಸರ್ಕಾರವು ರೈತ ಸಮ್ಮಾನ್ ಯೋಜನೆಯಲ್ಲಿ ವಾರ್ಷಿಕವಾಗಿ ರೂ.4000 ಗಳನ್ನು ರೂ.6000 ಗಳಿಗೆ ಹೆಚ್ಚಿಸಿ, ಎರಡು ಕಂತುಗಳಲ್ಲಿ ರೈತರ ಖಾತೆಗೆ ವರ್ಗಾಯಿಸುವುದು ಸೂಕ್ತ.
- ರಾಜ್ಯದಲ್ಲಿಯ ಪ್ರಮುಖ ಆಹಾರಧಾನ್ಯಗಳಾದ ಮಳೆಯಾಶ್ರಿತ ಭತ್ತ, ರಾಗಿ, ಜೋಳ ಮತ್ತು ಸಜ್ಜೆ ಬೆಳೆಗಳ ವಿಸ್ತೀರ್ಣ ಹಾಗೂ ಉತ್ಪಾದನೆ ಹೆಚ್ಚಿಸಲು, ಸದರಿ ಬೆಳೆಗಳಿಗೆ ರೈತ ಸಿರಿ ಯೋಜನೆಯನ್ನು ವಿಸ್ತರಿಸುವುದು ಸೂಕ್ತ.

**7. ಕೃಷಿ ಉತ್ಪನ್ನಗಳ ಬೆಲೆ ಏರಿಳಿತ ತಪ್ಪಿಸಲು ಅಡಮಾನ ಸಾಲ**

- ಅಭಿವೃದ್ಧಿ ಆಯುಕ್ತರ ಅಧ್ಯಕ್ಷತೆಯಲ್ಲಿನ ಎಸ್.ಎಲ್.ಬಿ.ಸಿ ಸಮಿತಿಯ ಉನ್ನತ ಮಟ್ಟದ ಸಭೆ ನಡೆಸಿ ಸಾಲದ ಕುರಿತು ಹೆಚ್ಚು ಪ್ರಚಾರ ಒದಗಿಸಿ, ಹೆಚ್ಚಿನ ಪ್ರಮಾಣದಲ್ಲಿ ಅಡಮಾನ ಸಾಲ ನೀಡುವುದು ಸೂಕ್ತ.
- ನಬಾರ್ಡ್ ನಿಯಮಾವಳಿಗನುಸಾರ ಮಾರುಕಟ್ಟೆ ಮೂಲ ಸೌಕರ್ಯ (Market Infrastructure)ದಡಿ ಹೆಚ್ಚಿನ ಸಂಖ್ಯೆಯ ಗೋದಾಮುಗಳನ್ನು ಹಾಗೂ ಶೀತಲ ಗೃಹಗಳನ್ನು (Cold Storage) ನಿರ್ಮಿಸಲು ಪ್ರೋತ್ಸಾಹಿಸುವುದು ಸೂಕ್ತ.
- ಕೃಷಿ ಉತ್ಪನ್ನಗಳನ್ನು ಅಡಮಾನವಾಗಿಟ್ಟು ರೈತರು ಸಾಲ ಪಡೆದಲ್ಲಿ RBI ನಿಯಾಮಾವಳಿ ಹಾಗೂ ನೀತಿ ಆಯೋಗದ ಸಲಹೆಗಳನ್ವಯ ರಿಯಾಯ್ತಿ ಬಡ್ಡಿದರ ವಿಧಿಸಲು ಕಡ್ಡಾಯಗೊಳಿಸಬೇಕು.

**8. ತೋಟಗಾರಿಕಾ ಮಾರಾಟ ಮಹಾ ಮಂಡಳ**

- ತೋಟಗಾರಿಕಾ ಬೆಳೆಗಳ ಉತ್ಪಾದನೆ, ಮಾರುಕಟ್ಟೆ, ಸುಸ್ಥಿರತೆ ಹಾಗೂ ಗ್ರಾಹಕರಿಗೆ ನಿಶ್ಚಿತ ಮಾಹಿತಿ ಮುಂತಾದವುಗಳನ್ನು ಒದಗಿಸಲು ಸೂಕ್ತ ತಂತ್ರಾಂಶವನ್ನು ಅಭಿವೃದ್ಧಿಪಡಿಸುವುದು ಸೂಕ್ತ.
- ತೋಟಗಾರಿಕಾ ಬೆಳೆಗಳ ಮಾರಾಟ ಸರಪಳಿ ಸುಸ್ಥಿರಗೊಳಿಸಿ, ರೈತರಿಗೆ ಯೋಗ್ಯ ಬೆಲೆ ಹಾಗೂ ಗ್ರಾಹಕರಿಗೆ ನಿರ್ದಿಷ್ಟ ಬೆಲೆ ದೊರಕುವಂತಾಗಲು NDBB /KMF ಮಾದರಿಯಲ್ಲಿ ಈಗಿರುವ KHF ಉನ್ನತೀಕರಿಸಿ "ಕರ್ನಾಟಕ ತೋಟಗಾರಿಕಾ ಮಾರಾಟ ಮಹಾ ಮಂಡಳ" ಸ್ಥಾಪನೆ ಮಾಡುವುದು ಅತ್ಯವಶ್ಯಕವಾಗಿದೆ.

**9. ರೈತರ ಚೌಕಾಸಿ ಸಾಮರ್ಥ್ಯ**

- ಕೃಷಿ ಹಾಗೂ ತೋಟಗಾರಿಕಾ ವಿಶ್ವವಿದ್ಯಾಲಯಗಳು ಹಾಗೂ ಕೃಷಿ ವಿಜ್ಞಾನ ಕೇಂದ್ರಗಳು ರೈತ ಉತ್ಪಾದಕ ಗುಂಪುಗಳಿಗೆ ಕೊಯ್ಲು ನಂತರದ ತಂತ್ರಜ್ಞಾನ, ಕಡಿಮೆ ವೆಚ್ಚದಲ್ಲಿ ಉತ್ಪಾದನೆ,

ಯಾಂತ್ರೀಕರಣ ಬಳಕೆ. ಸಂಸ್ಕರಣೆ ಹಾಗೂ ಇತರೆ ತಂತ್ರಜ್ಞಾನಗಳ ಬಗ್ಗೆ ಪ್ರಾತ್ಯಕ್ಷಿತೆಯೊಂದಿಗೆ ರೈತರಿಗೆ ಉಪಯೋಗವಾಗುವ ಮಾಹಿತಿ ಒದಗಿಸಲು ಸೂಕ್ತ ಕಾರ್ಯಕ್ರಮಗಳನ್ನು ರೂಪಿಸಬೇಕು.

- ರೈತ ಉತ್ಪಾದಕ ಗುಂಪುಗಳು ವೃತ್ತಿಪರತೆ ಹೊಂದುವಂತಾಗಲು. ಕ್ಲೀನಿಂಗ್. ಗ್ರೇಡಿಂಗ್. ಸಂಗ್ರಹಣಾ ಗೋದಾಮುಗಳು. ಶೀತಲ ಘಟಕಗಳು ಇತ್ಯಾದಿಗಳನ್ನು ಸ್ವಂತವಾಗಿ ಹೊಂದಲು ಪ್ರೋತ್ಸಾಹಿಸಬೇಕು. ಸಂಸ್ಕರಣೆಯ ಬಗ್ಗೆ ಸಾಮರ್ಥ್ಯಾಭಿವೃದ್ಧಿಯನ್ನು ಹೊಂದುವಂತೆ ಮಾಡಬೇಕು. ಜೊತೆಗೆ ಆಮದು ಮತ್ತು ರಫ್ತು ಚಟುವಟಿಕೆಗಳನ್ನು ಮಾಡುವಂತೆ ಪ್ರೋತ್ಸಾಹಿಸಬೇಕು.

**10. ಕೃಷಿ ಉತ್ಪನ್ನಗಳ ಆಮದು ಮತ್ತು ರಫ್ತು**

- ದೇಶೀಯ ಬೇಡಿಕೆ. ಪೂರೈಕೆಗಳನ್ನಾಧರಿಸಿ ಬೆಲೆಗಳು ನಿರ್ಣಯವಾಗುವುದರಿಂದ ದೇಶೀಯ ಬೇಡಿಕೆ ಹಾಗೂ ಉತ್ಪಾದನೆಗಳ ನಡುವೆ ಅಂತರವಿದ್ದಾಗ. ಕೊರತೆಯ ಪ್ರಮಾಣದಷ್ಟು ಮಾತ್ರ ಆಮದು ಮಾಡಿಕೊಳ್ಳಬೇಕು.
- ರಾಜ್ಯದಲ್ಲಿ ಬೆಳೆಯಲಾಗುವ ಅತ್ಯಧಿಕ ಪ್ರಮಾಣದ ಮೆಕ್ಕೆಜೋಳ. ಸೋನಾ ಮಸೂರಿ. ಕುಸುಬಲಕ್ಕಿ (Boiled Rice) ಹಾಗೂ ಸಂಬಾರು ಪದಾರ್ಥಗಳಿಗೆ ಹೊರ ದೇಶಗಳಲ್ಲಿ ಬೇಡಿಕೆ ಇದ್ದು. ರಫ್ತು ಮಾಡಲು ವಿಪುಲ ಅವಕಾಶಗಳಿದ್ದು. ರಫ್ತು ಉತ್ತೇಜನ ಕ್ರಮಗಳನ್ನು ಕೈಗೊಳ್ಳಬೇಕು.

**III.ಇನ್ನಿತರೇ ಶಿಫಾರಸ್ಸುಗಳು**

1. **ಭೌಗೋಳಿಕ ಸೂಚ್ಯಂಕ (Geographical Indicator)**

- ಭೌಗೋಳಿಕ ಸೂಚ್ಯಂಕ (Geographical Indicator - GI) ವನ್ನು ಕಲಬುರಗಿಯ ತೊಗರಿಗೆ ಪಡೆದ ಮಾದರಿಯಲ್ಲಿ ಬಿಜಾಪುರದ ಬಿಳಿ ಜೋಳ. ತುಂಗಭದ್ರದ ಸೋನಾ ಮಸೂರಿ ಅಕ್ಕಿ. ತಿಪಟೂರಿನ ಕೊಬ್ಬರಿ. ಬಿಜಾಪುರದ ಒಣದ್ರಾಕ್ಷಿ (Raisin) ಒಳಗೊಂಡಂತೆ ಪ್ರಮುಖ ಉತ್ಪನ್ನಗಳಿಗೆ ಭೌಗೋಳಿಕ ಸೂಚ್ಯಂಕವನ್ನು ಪಡೆಯಲು ಸಂಬಂಧಿತ ವಿಶ್ವವಿದ್ಯಾಲಯಗಳಿಗೆ ಜವಾಬ್ದಾರಿ ನೀಡಬೇಕು.

2. **ಆದಾಯ ಹೆಚ್ಚಿಸಲು ಮೌಲ್ಯವರ್ಧನೆ ಹಾಗೂ ಇನ್ನಿತರ ಕ್ರಮಗಳು**

- COVID -19 ಕಾರಣದಿಂದಾಗಿ ನಗರ ಪ್ರದೇಶಗಳಿಗೆ ಉದ್ಯೋಗ ಅರಸಿ ವಲಸೆ ಹೋದ ಕಾರ್ಮಿಕರು ಗ್ರಾಮಗಳಿಗೆ ಮರಳಿದ್ದು. ಕೃಷಿ ಚಟುವಟಿಕೆಯಲ್ಲಿ ತೊಡಗಿದ್ದಾರೆ. ಕೃಷಿ ಕ್ಷೇತ್ರದಲ್ಲಿ ಹಂಗಾಮುವಾರು ಉದ್ಯೋಗ ದೊರಕುತ್ತದೆಯೇ ಹೊರತು ವರ್ಷ ಪೂರ್ತಿ ಉದ್ಯೋಗ ದೊರಕುವುದಿಲ್ಲ. ಈ ಹಿನ್ನಲೆಯಲ್ಲಿ ಗ್ರಾಮೀಣ ಪ್ರದೇಶದಲ್ಲಿಯೇ ಮೌಲ್ಯವರ್ಧನೆ ಕಾರ್ಯಗಳನ್ನು ಪ್ರೋತ್ಸಾಹಿಸಿ. ತಾಂತ್ರಿಕ ಅಧ್ಯಯನ ಮಾಡಿ. ಕಾರ್ಮಿಕರ ನೈಪುಣ್ಯತೆ ವೃದ್ಧಿಗೊಳಿಸಿ. ಗ್ರಾಮಗಳಲ್ಲಿಯೇ ಉದ್ಯೋಗಾವಕಾಶಗಳನ್ನು ಸೃಷ್ಟಿಸಲು ಸಮಗ್ರ ಕಾರ್ಯ ಯೋಜನೆಗಳನ್ನು ರೂಪಿಸಿ. ಕಾರ್ಯಾನುಷ್ಠಾನಗೊಳಿಸುವುದು ಅತ್ಯವಶ್ಯಕವಾಗಿದೆ.
- ಕೇಂದ್ರ ಸರ್ಕಾರದ "ಕೌಶಲ್ಯ ಭಾರತ (Skill India)" ಯೋಜನೆಯಡಿ ಗ್ರಾಮೀಣ ಪ್ರದೇಶದಲ್ಲಿಯೇ ಮೌಲ್ಯವರ್ಧನೆ ಕಾರ್ಯಗಳನ್ನು ಪ್ರೋತ್ಸಾಹಿಸಿ. ಅಭಿವೃದ್ಧಿ ಪಡಿಸಲು ಸಾಧ್ಯವಾಗುತ್ತದೆ. ಹೆಚ್ಚಿನ ಉದ್ಯೋಗಾವಕಾಶ ಸೃಷ್ಟಿಸಲು ಲಭ್ಯವಿರುವ ಆಹಾರ ತಾಂತ್ರಿಕ ಕ್ಷೇತ್ರ (Food Technology Park) ದಲ್ಲಿ ಖಾಸಗಿ ವಲಯದಲ್ಲಿರುವ ಆಹಾರ ಸಂಸ್ಕರಣಾ ಸಂಸ್ಥೆಗಳ ತಾಂತ್ರಿಕತೆ ಅಧ್ಯಯನ ಮಾಡಿ. ಉನ್ನತೀಕರಿಸಿ ಗ್ರಾಮೀಣ ಮಟ್ಟದಲ್ಲಿಯೇ ಅಳವಡಿಸುವಂತಾಗಬೇಕು. ಇದಕ್ಕಾಗಿ FPO, MPCS, TAPCMS, PACS ಗಳನ್ನು ಪ್ರೋತ್ಸಾಹಿಸಬೇಕು.
- ಕೃಷಿ ಉತ್ಪನ್ನಗಳ ಕಚ್ಚಾ ಬೆಲೆ ಹಾಗೂ ಗ್ರಾಹಕರ ಸಿದ್ಧ ಬೆಲೆಗಳ ನಡುವಿನ ವ್ಯತ್ಯಾಸ ಅಜಗಜಾಂತರವಿರುವುದರಿಂದ ರೈತರ ಹಾಗೂ ಗ್ರಾಹಕರ ಹಿತ ಕಾಪಾಡಲು ಕಚ್ಚಾ ವಸ್ತುಗಳು ಹಾಗೂ

ಸಿದ್ಧ ವಸ್ತುಗಳ ನಡುವಿನ ಬೆಲೆಗಳ ವ್ಯತ್ಯಾಸದ ಬಗ್ಗೆ ಸಮಗ್ರ ಅಧ್ಯಯನ ನಡೆಸಿ ದತ್ತಾಂಶ ಮತ್ತು ತಂತ್ರಾಂಶಗಳನ್ನು ಅಭಿವೃದ್ಧಿ ಪಡಿಸಿ ಬಳಕೆಯಲ್ಲಿ ತರುವುದು ಸೂಕ್ತ.

- ಬಿದಿರು ಬಹು ಬೇಡಿಕೆಯ ಉತ್ಪನ್ನವಾಗಿದ್ದು, ಕಡಿಮೆ ಖರ್ಚಿನಲ್ಲಿ ಬೆಳೆಯಬಹುದಾಗಿದ್ದು, ರೈತರು ತಮ್ಮ ಜಮೀನುಗಳಲ್ಲಿ, ಬೀಳು ಭೂಮಿಗಳಲ್ಲಿ ಹಾಗೂ ಹೊಲದ ಬದುಗಳಲ್ಲಿ ಬೆಳೆಯಲು ಸರ್ಕಾರ ಉತ್ತೇಜಿಸಿದಲ್ಲಿ ರೈತರ ಆದಾಯ ಹೆಚ್ಚಿಸುವಲ್ಲಿ ಸಹಕರಿಸಿದಂತಾಗುತ್ತದೆ.

ಕೃಷಿ ನಿರ್ದೇಶಕರು.

## ಅನುಬಂಧ-2- ಕೃಷಿ ಬೆಲೆ ಆಯೋಗದ ವರದಿಯಲ್ಲಿ ಪ್ರಸ್ತಾಪಿತ ಶಿಫಾರಸ್ಸುಗಳ ಅನುಷ್ಠಾನ :

1) ಪಡಿತರ ವ್ಯವಸ್ಥೆಯಲ್ಲಿ ವಿತರಿಸಲಾಗುವ ಅಕ್ಕಿಯ ಜೊತೆಗೆ 60:40 ಅನುಪಾತದಲ್ಲಿ ಸ್ಥಳೀಯವಾಗಿ ಬೆಳಯಲಾಗುವ ಜೋಳ ಮತ್ತು ರಾಗಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿಸಿ ಪಡಿತರ ವ್ಯವಸ್ಥೆಯಲ್ಲಿ ವಿತರಿಸುವುದು.

2) ಪಡಿತರ ವ್ಯವಸ್ಥೆಗೆ ಅವಶ್ಯವಿರುವ ಭತ್ತ, ಜೋಳ ಹಾಗೂ ರಾಗಿಯನ್ನು ಬೆಂಬಲ ಬೆಲೆಯಲ್ಲಿ ಖರೀದಿಸುವಾಗ ರೈತರಿಗೆ ವಿಧಿಸಿದ ಗರಿಷ್ಠ ಮಿತಿಯನ್ನು ಸಡಿಲಗೊಳಿಸಿ ಎಕರೆವಾರು ಪ್ರಮಾಣವನ್ನು ಮಿತಿಗೊಳಿಸಿ ಖರೀದಿಸುವುದು.

3) PMFBYನಲ್ಲಿ ಪರಿಹಾರ ಧನ ರೈತರಿಗೆ ಬೇಗನೆ ದೊರಕಲು NIC ಯಲ್ಲಿನ ತಂತ್ರಾಂಶ ದೋಷ ಸರಿಪಡಿಸಿರುವುದು.

4) ರೈತರ ಆತ್ಮಹತ್ಯೆ ತಡೆಗಟ್ಟಲು ಪರಿಹಾರೋಪಾಯಗಳು.

5) ರಾಜ್ಯದಲ್ಲಿ ಜೋಳವನ್ನು ಹಿಂಗಾರು ಹಂಗಾಮಿನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಬೆಳೆಯಲಾಗುತ್ತಿದ್ದು, ಕೇಂದ್ರಕ್ಕೆ ಹಿಂಗಾರು ಹಂಗಾಮಿನಲ್ಲಿ ಬೆಂಬಲ ಬೆಲೆ ಘೋಷಿಸಲು ಶಿಫಾರಸ್ಸು ಮಾಡಿರುವುದು.

6) ಜೋಳವನ್ನು ಬೆಂಬಲ ಬೆಲೆಯಲ್ಲಿ ಖರೀದಿಸುವಾಗ ರಾಜ್ಯದಲ್ಲಿನ ಮುಂಗಾರು/ ಹಿಂಗಾರು ಹಂಗಾಮಿನ ಉತ್ಪನ್ನವನ್ನು ಪರಿಗಣಿಸುವುದು.

7) ಬೆಂಬಲ ಬೆಲೆಯಲ್ಲಿ ಖರೀದಿಸುವಾಗ ಜೋಳ (ಹೈಬ್ರಿಡ್) ಹಾಗೂ ಜೋಳ (ಮಾಲ್ದಂಡಿ) ಪ್ರಬೇಧಗಳಿದ್ದು, ರಾಜ್ಯದಲ್ಲಿ ಬೆಳೆಯಲಾಗುವ ಬಿಳಿ ಹೈಬ್ರಿಡ್ ಜೋಳವನ್ನು ಬೆಂಬಲ ಬೆಲೆಯಲ್ಲಿ ಖರೀದಿಸುವುದು.

8) ಹೆಸರು, ಉದ್ದು, ತೊಗರಿ, ಎಣ್ಣೆಕಾಳುಗಳ ಬೆಲೆ ಕುಸಿತವಾದಾಗ ಬೆಂಬಲ ಬೆಲೆಯಲ್ಲಿ ರೈತರಿಂದ ಖರೀದಿಸುವಂತೆ ಸರ್ಕಾರಕ್ಕೆ ಶಿಫಾರಸ್ಸು ಮಾಡಿರುವುದು.

9) ಅವಶ್ಯಕ ಸಂದರ್ಭಗಳಲ್ಲಿ ಬೆಂಬಲ ಬೆಲೆ ಖರೀದಿ ಅವಧಿಯನ್ನು ವಿಸ್ತರಣೆ ಮಾಡಿರುವುದು (ಉದಾ: ಭತ್ತ, ರಾಗಿ, ಜೋಳ ಉತ್ಪನ್ನಗಳು).